**<u>ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ. 313/2020**

| | | | |
|---|---|---|---|
| **ಹೆಸರು** | **:** | **ಗುಂಡಮ್ಮ** | **ದೋ.ಸಾ. 13** |
| **ಗಂಡನ ಹೆಸರು** | **:** | **ಶಿವಶರಣಪ್ಪ** | **ಪ್ರಾ.ಸಾ. 8** |
| **ವಯಸ್ಸು** | **:** | **47 ವರ್ಷ** | **ದಿನಾಂಕಃ 08-11-2023** |
| **ಉದ್ಯೋಗ** | **:** | **ಕೂಲಿ** | |
| **ವಾಸಸ್ಥಳ** | **:** | **ಹೊಳಕುಂದಾ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-1, 8 ರಿಂದ 12 ನನಗೆ ಗೊತ್ತಿಲ್ಲ. ಮೃತ ಬಾಬುರಾವ ಸಹ ನನಗೆ ಗೊತ್ತಿಲ್ಲ.

ಈ ಪ್ರಕರಣದ ಆರೋಪಿ ವಿಜಯಕುಮಾರ ನನಗೆ ಗೊತ್ತಿಲ್ಲ.

ಈಗ್ಗೆ 5 ವರ್ಷಗಳ ಹಿಂದೆ ಒಂದು ದಿನ ನಾನು ಚಿಮ್ಮನಚೊಡಿಗೆ ಕಾಯಿಪಲ್ಯೆ ತರುವ ಸಲುವಾಗಿ ಮಧ್ಯಾಹ್ನ 04-30 ರ ಸುಮಾರಿಗೆ ನರನಾಳ ಬಸ್ ನಿಲ್ದಾಣದ ಬಳಿ ನಿಂತಿದ್ದ ಆರೋಪಿ ವಿಜಯಕುಮಾರನ ಆಟೋಗೆ ಹತ್ತಿಕೊಂಡೆ. ಸದರಿ ಆಟೋ ನಂಬರ ನನಗೆ ಗೊತ್ತಿಲ್ಲ. ಸದರಿ ಆಟೋದಲ್ಲಿ ಅದಾಗಲೇ 2-3 ಜನ ಪ್ರಯಾಣಿಕರು ಕುಳಿತಿದ್ದರು. ಅವರ ಹೆಸರು ನನಗೆ ಗೊತ್ತಿಲ್ಲ. ನನ್ನನ್ನು ಮತ್ತು ಸದರಿ ಪ್ರಯಾಣಿಕರನ್ನು ಕೂರಿಸಿಕೊಂಡು ಆರೋಪಿ ತನ್ನ ಆಟೋವನ್ನು ಚಿಮ್ಮನಚೊಡು ಕಡೆಗೆ ಚಲಾಯಿಸಿಕೊಂಡು ಹೋದ. ಆರೋಪಿ ತನ್ನ ಆಟೋವನ್ನು ನಿಧಾನವಾಗಿಯೇ ಚಲಾಯಿಸಿಕೊಂಡು ಹೋಗುತ್ತಿದ್ದ.

ಸುಮಾರು ಸಂಜೆ 04-30 ಗಂಟೆಗೆ ನಾವು ಪ್ರಯಾಣಿಸುತ್ತಿದ್ದ ಆಟೋ ನರನಾಳ-ಚಿಮ್ಮನಚೊಡು ಗ್ರಾಮದ ರಸ್ತೆಯಲ್ಲಿ ನಿಧಾನವಾಗಿ ಹೋಗುತ್ತಿತ್ತು. ನಮ್ಮ ಆಟೋದ ಮುಂದೆ ಹೋಗುತ್ತಿದ್ದ ಮತ್ತೊಂದು ವಾಹನವನ್ನು ಹಿಂದಕ್ಕಲು ಆರೋಪಿ ತನ್ನ ಆಟೋವನ್ನು ಪಕ್ಕಕ್ಕೆ ಸರಿಸಿದಾಗ ರಸ್ತೆಯಲ್ಲಿ ಗುಂಡಿ ಇದಿದ್ದರಿಂದ ಆಟೋದ ಎಡಭಾಗದ ಚಕ್ರ ಸದರಿ ಗುಂಡಿ ಮೇಲೆ ಹಾಯ್ದಿದ್ದರ ಪರಿಣಾಮ ಆಟೋ ರಸ್ತೆಯ ಎಡಭಾಗಕ್ಕೆ ಪಲ್ಟಿಯಾಯಿತು. ಸಾಕ್ಷಿ ಸ್ವ-ಇಚ್ಛೆಯಿಂದ ಆರೋಪಿ ತಪ್ಪಿನಿಂದ ಆಟೋ ಪಲ್ಟಿಯಾಗಿಲ್ಲ ಎನ್ನುತ್ತಾರೆ.

ನಾನು ಆಟೋದ ಎಡಭಾಗಕ್ಕೆ ಕುಳಿತ್ತಿದ್ದರಿಂದ ನನ್ನ ಸೊಂಟ ಮತ್ತು ಹೊಟ್ಟೆಗೆ ಪೆಟ್ಟಾಗಿತ್ತು. ಸದರಿ ಆಟೋದಲ್ಲಿ ನನ್ನಂತೆ ಪ್ರಯಾಣ ಮಾಡುತ್ತಿದ್ದ ಉಳಿದ 3 ಜನ ಪ್ರಯಾಣಿಕರಿಗೂ ಪೆಟ್ಟಾಯಿತು. ಸದರಿ ಅಪಘಾತದಲ್ಲಿ ಆರೋಪಿ ವಿಜಯಕುಮಾರನಿಗೂ ಸಣ್ಣ-ಪುಟ್ಟ ಗಾಯ ಆಯಿತು. ಸದರಿ ಅಪಘಾತದಲ್ಲಿ ಯಾರಿಗಾದರೂ ಪ್ರಾಣ ಹಾನಿ ಆದ ಬಗ್ಗೆ ನನಗೆ ಗೊತ್ತಿಲ್ಲ.

ಪೋಲೀಸರು ಈ ಪ್ರಕಣದ ಸಂಬಂಧ ನನ್ನನ್ನು ವಿಚಾರಣೆ ಮಾಡಿಲ್ಲ. ಪೋಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

ಘಟನೆ ನಡೆದ ದಿನ ನಾನು ಕುಳಿತಿದ್ದ, ಆರೋಪಿ ಚಲಾಯಿಸುತ್ತಿದ್ದ ಮತ್ತು ಅಪಘಾತಕ್ಕಿಡಾದ ಆಟೋವನ್ನು ಈಗ ನನಗೆ ತೋರಿಸಲಾದ ಫೋಟೊದಲ್ಲಿ ನೋಡಿ ಗುರುತಿಸುತ್ತಿದ್ದೇನೆ. ಸದರಿ ಫೋಟೊಗಳನ್ನು ಈಗಾಗಲೇ ನಿಪಿ-3 ಮತ್ತು 4 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಕೊಟ್ಟಿರುವ ಹೇಳಿಕೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ನಾನು ಹೇಳಿದ ಘಟನೆ ದಿನಾಂಕ 12-05-2019 ರಂದು ಸಂಜೆ 05-30 ಕ್ಕೆ ಆಗಿತ್ತು ಎಂದರೆ ಸರಿ. ಸದರಿ ದಿನ ನಾನು ಕುಳಿತ್ತಿದ್ದ, ಆರೋಪಿ ಚಲಾಯಿಸುತ್ತಿದ್ದ ಮತ್ತು ಅಪಘಾತಕ್ಕಿಡಾದ ಆಟೋ ನಂಬರ ಕೆಎ-32 ಸಿ-1127 ಆಗಿತ್ತು ಎಂದು ಸೂಚಿಸಿದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಆಟೋದಲ್ಲಿ ನನ್ನಂತೆ ಹಸರಗುಂಡಗಿ ಗ್ರಾಮದ ಬಾಬುರಾವ, ಚಾಸಾ-10 ಲಕ್ಷ್ಮಿ, ನಮ್ಮ ಊರಿನವಳಾದ ಚಾಸಾ-11 ಗುಂಡಪ್ಪ ಮತ್ತು ಚಾಸಾ-12 ಕಲಾವತಿ ಸಹ ಕುಳಿತು ಚಿಮ್ಮನಚೊಡು ಕಡೆಗೆ ಪ್ರಯಾಣ ಮಾಡುತ್ತಿದ್ದರು ಎಂದರೆ ನನಗೆ ಅವರ ಹೆಸರು ಗೊತ್ತಿಲ್ಲ ಎನ್ನುತ್ತಾರೆ. ಸದರಿ ಆಟೋವನ್ನು ನರನಾಳ-ಕನಕಪೂರ ರಸ್ತೆಯಲ್ಲಿ ಬರುವ ರೋಹಿಲ್ಲಾ ತಾಂಡದ ಕ್ರಾಸ್ ಸಮೀಪ ಅದರ ಚಾಲಕನಾಗಿದ್ದ ಆರೋಪಿ ಅತೀ ವೇಗವಾಗಿ ಚಲಾಯಿಸಿಕೊಂಡು ಹೋಗಿ ರಸ್ತೆಯಲ್ಲಿದ್ದ ಗುಂಡಿ ಮೇಲೆ ಹತ್ತಿಸಿದ್ದರಿಂದ ಆಟೋ ಪಲ್ಟಿಯಾಗಿ ಮುಳ್ಳು ಕಂಟಿಗಳಿರುವ ರಸ್ತೆಯ ಎಡಭಾಗಕ್ಕೆ ಬಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಸ್ವ-ಇಚ್ಛೆಯಿಂದ ಆಟೋ ನಿಧಾನವಾಗಿಯೇ ಚಲಿಸುತ್ತಿತ್ತು ಎನ್ನುತ್ತಾರೆ. ಆಟೋ ನಿಧಾನವಾಗಿಯೇ ಚಲಿಸುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಸದರಿ ಘಟನೆಯಲ್ಲಿ ಚಾಸಾ-11 ರವರ ಎಡಭುಜಕ್ಕೆ ಪೆಟ್ಟಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಚಾಸಾ-10 ರವರ ಬಲಗಾಲು ಮತ್ತು ಸೊಂಟಕ್ಕೆ ಪೆಟ್ಟಾಯಿತು ಎಂದರೆ ನನಗೆ ಗೊತ್ತಿಲ್ಲ. ಚಾಸಾ-12

ರವರ ಎಡಗೈ, ಎಡಗಾಲು ಮತ್ತು ಬೆನ್ನಿಗೂ ಗಾಯವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಮತ್ತೊಬ್ಬ ಪ್ರಯಾಣಿಕ ಬಾಬುರಾವನ ಎದೆಗೆ ಒಳಪೆಟ್ಟಾಗಿತ್ತು, ಬಲಗೈಗೆ ತರಚಿದ ಗಾಯಗಳಾಗಿತ್ತು, ಬಲಗಾಲಿನ ಹಿಮ್ಮಡಿಗೆ ರಕ್ತಗಾಯವಾಗಿತ್ತು ಮತ್ತು ಆತನಿಗೆ ಪ್ರಜ್ಞೆ ತಪ್ಪಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಬಾಬುರಾವನ ಸಂಬಂಧಿಕರಾದ ಚಾಸಾ-1, 8 ಮತ್ತು 9 ರವರ ಘಟನಾ ಸ್ಥಳಕ್ಕೆ ಬಂದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಚಾಸಾ-1, 8 ಮತ್ತು 9 ರವರೇ ನನ್ನನ್ನು, ಚಾಸಾ-10, 11, 12 ಮತ್ತು ಗಾಯಾಳು ಬಾಬುರಾವನನ್ನು ಆ್ಯಂಬುಲೆನ್ಸನಲ್ಲಿ ಚಿಂಚೋಳಿ ಆಸ್ಪತ್ರೆಗೆ ತಂದು ಸೇರಿಸಿದರು ಎಂದರೆ ಸರಿಯಲ್ಲ. ನಾನು ಹೆಚ್ಚಿನ ಉಪಚಾರಕ್ಕೆ ಕಲ್ಬುರ್ಗಿ ಕಾಮರೆಡ್ಡಿ ಆಸ್ಪತ್ರೆಗೆ ಸೇರಿಕೆ ಆದೆ ಎಂದರೆ ಸರಿ. ಗಾಯಾಳು ಬಾಬುರಾವನನ್ನು ಅದೇ ಆಸ್ಪತ್ರೆಗೆ ಸೇರಿಕೆ ಮಾಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಅದೇ ದಿನ ರಾತ್ರಿ ಬಾಬುರಾವ ತೀರಿಕೊಂಡ ಎಂದು ಚಾಸಾ-8 ರವರ ಮೂಲಕ ನನಗೆ ಗೊತ್ತಾಯಿತು ಎನ್ನುವುದು ಸರಿಯಲ್ಲ.

ಆರೋಪಿ ತಪ್ಪಿನಿಂದಲೆ ಅಪಘಾತ ಆಗಿದೆ ಎಂದು ಮತ್ತು ಮೇಲ್ಕಂಡ ಎಲ್ಲಾ ವಿಚಾರಗಳನ್ನು ದಿನಾಂಕ 04-07-2019 ರಂದು ಪೊಲೀಸರ ಮುಂದೆ ನಾನು ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೆ ಎನ್ನುವುದು ಸರಿಯಲ್ಲ.

ಸಾಕ್ಷಿ ಕೊಟ್ಟಿದ್ದಾರೆ ಎನ್ನಲಾದ ಹೇಳಿಕೆಯನ್ನು ಈಗ ನಿಪಿ-5 ಎಂದು ಗುರುತಿಸಲಾಯಿತು.

ಆರೋಪಿ ತಪ್ಪಿನಿಂದಲೆ ಅಪಘಾತ ಆಗಿದೆ ಎಂದು ನನಗೆ ಗೊತ್ತಿದ್ದರು ಸಹ ಮತ್ತು ಆ ಸಂಬಂಧ ನಿಪಿ-5 ರಂತೆ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದರೂ ಸಹ ಈಗ ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಪಿ.ಆರ್. ವಕೀಲರಿಂದಃ ಇಲ್ಲಾ .**

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**